1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿರವರ ನ್ಯಾಯಾಲಯ, ಅರಕಲಗೂಡು

ಸಿ.ಸಿ.ನಂಃ **131/2025**

ದಿನಾಂಕಃ **10.09.2025**

ಪಿರ್ಯಾದಿ :- ಕೊಣನೂರು ಪೊಲೀಸ್ ಠಾಣೆ,

ವಿರುದ್ಧ

ಆರೋಪಿ :- ಸಾಗರ್ ಬಿನ್ ಕುಮಾರ

:: ಆಪಾದನೆ ::

ಶ್ರೀ.ರಘು.ಎಂ., 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ಅರಕಲಗೂಡು ಆದ ನಾನು, ಆರೋಪಿಯಾದ

ಸಾಗರ್ ಬಿನ್ ಕುಮಾರ
ಸುಮಾರು 29 ವರ್ಷ ವಯಸ್ಸು,
ವಾಸಃ ತಾತನಹಳ್ಳಿ ಗ್ರಾಮ,
ಹಳ್ಳಿಮೈಸೂರು ಹೋಬಳಿ ,
ಹೆಚ್.ಎನ್.ಪುರ ತಾಲ್ಲೂಕು,
ಹಾಸನ ಜಿಲ್ಲೆ.

ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ-

ಕೊಣನೂರು ಪೊಲೀಸ್ ಠಾಣಾ ಸರಹದ್ದಿನ ಅರಕಲಗೂಡು ತಾಲ್ಲೂಕು, ದೊಡ್ಡಮಗ್ಗೆ ಹೋಬಳಿ, ದೊಡ್ಡಮಗ್ಗೆ ಗ್ರಾಮದ ಬಸ್ ಸ್ಟ್ಯಾಂಡ್ ನಿಂದ ಮುಂಭಾಗ ಅಂದರೆ ದಕ್ಷಿಣ ದಿಕ್ಕಿನಲ್ಲಿ ಹಾದು ಹೋಗಿರುವ ರಾಮನಾಥಪುರ–ಬೆಳವಾಡಿ ರಸ್ತೆಯ ಕ್ರಾಸ್ ನಲ್ಲಿ ದಿನಾಂಕಃ 12.12.2024 ರಂದು ಸಂಜೆ 4.30 ಗಂಟೆ ಸಮಯದಲ್ಲಿ ಆರೋಪಿಯಾದ ನೀವು ಕೆಎ 19 ಇಇ 4423 ರ ನಂಬರ್ ನ ಸ್ಪ್ಲೆಂಡರ್ ಎನ್ ಎಕ್ಸ್ ಜಿ ಬೈಕನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಓಡಿಸಿಕೊಂಡು ಹೋಗಿ ಸಡನ್ ಆಗಿ ಬ್ರೇಕ್ ಹಾಕಿರುತ್ತೀರಿ. ಆ ಮೂಲಕ ಆರೋಪಿಯಾದ ನೀವು ಭಾ ನ್ಯಾ ಸಂ ಕಲಂ 281 ರಂತೆ ಶಿಕ್ಷಾರ್ಹವಾದ ಹಾಗೂ ನನ್ನ ಸಂಜ್ಞೆಯಲ್ಲಿ ಅಪರಾಧವೆಸಗಿರುತ್ತೀರಿ.

ಎರಡನೇಯದಾಗಿ ಮೇಲೆ ಹೇಳಿದ ದಿನ, ಸಮಯ ಹಾಗೂ ಸಂದರ್ಭದಂದು ಆರೋಪಿಯಾದ ನೀವು ಸಡನ್ ಆಗಿ ಬ್ರೇಕ್ ಹಾಕಿ ಅಪಘಾತಪಡಿಸಿದ ಪರಿಣಾಮ, ಸಾಕ್ಷಿ.2 ರವರು ಬೈಕ್ ಸಮೇತ ರಸ್ತೆಗೆ ಬಿದ್ದಾಗ ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿದ ಕ್ರಮ ಸಂಖ್ಯೆ 1 ರಿಂದ 4 ರ ರೀತ್ಯಾ

ಸಾಕ್ಷಿ.2 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತದೆ. ಆ ಮೂಲಕ ಆರೋಪಿಯಾದ ನೀವು ಭಾ ನ್ಯಾ ಸಂ ಕಲಂ 125(ಎ) ರಂತೆ ಶಿಕ್ಷಾರ್ಹವಾದ ಹಾಗೂ ನನ್ನ ಸಂಜ್ಞೆಯಲ್ಲಿ ಅಪರಾಧವೆಸಗಿರುತ್ತೀರಿ.

ಮೂರನೇಯದಾಗಿ ಮೇಲೆ ಹೇಳಿದ ದಿನ, ಸಮಯ ಹಾಗೂ ಸಂದರ್ಭದಂದು ಆರೋಪಿಯಾದ ನೀವು ಸಡನ್ ಆಗಿ ಬ್ರೇಕ್ ಹಾಕಿ ಅಪಘಾತಪಡಿಸಿದ ಪರಿಣಾಮ ಸಾಕ್ಷಿ.2 ರವರು ಬೈಕ್ ಸಮೇತ ರಸ್ತೆಗೆ ಬಿದ್ದಾಗ ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿದ ಕ್ರಮ ಸಂಖ್ಯೆ ಎ ಯಿಂದ ಸಿ ರ ರೀತ್ಯಾ ಸಾಕ್ಷಿ.2 ರವರಿಗೆ ತೀವ್ರ ಸ್ವರೂಪದ ಗಾಯಗಳಾಗಿರುತ್ತದೆ. ಆ ಮೂಲಕ ಆರೋಪಿಯಾದ ನೀವು ಭಾ ನ್ಯಾ ಸಂ ಕಲಂ 125(ಬಿ) ರಂತೆ ಶಿಕ್ಷಾರ್ಹವಾದ ಹಾಗೂ ನನ್ನ ಸಂಜ್ಞೆಯಲ್ಲಿ ಅಪರಾಧವೆಸಗಿರುತ್ತೀರಿ.

ಪ್ರ 1. ನಿಮಗೆ ಈಗ ಓದಿ ಹೇಳಿದ ಆಪಾದನೆ ತಿಳಿಯಿತೇ ?

ಉತ್ತರಃ

ಪ್ರ 2. ನೀವು ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕಾ ?

ಉತ್ತರಃ

[ಮೇಲ್ಕಂಡ ಆರೋಪದ ಮೇಲೆ ಆರೋಪಿಯಾದ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಿರುತ್ತೀರೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ]

ದಿನಾಂಕಃ 10-09-2025
ಸ್ಥಳಃ ಅರಕಲಗೂಡು

(ಶ್ರೀ.ರಘು.ಎಂ.)
1ನೇ ಹೆಚ್ಚುವರಿ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ, ಅರಕಲಗೂಡು.